ಹುಡುಗಿಯ ಕಡೆ ಅಜ್ಜಿ: ನಿಸಾಧಾನ್ಕೆ ಮಾಸತಾಡ್ರೆ ಮಸಳ್ಳೇರಾ (ನಿಧಾನಕ್ಕೆ ಮಾತಾಡ್ರೆ ಮಳ್ಳೇರಾ).

ಈ ಹೊಸ ನಮೂನಿ ಮಾತ ಕೇಳಿ ಗಂಗವ್ವ ತಡಬಡಾಯಿಸಿದಳು. "ಹುಡುಗ ಯಾವ್ದೋ ಜಾತೀಲಿ ಹೆಣ್ಣು ನೋಡಿ ಗುಂಡಿಗೆ ಬಿದ್ದಾನೆ. ಅವನ ಗೆಳೆಕಾರ್‍ರು ಸೇರಿ ಸರಿಯಾಗೇ ಮೋಸ ಮಾಡಿದ್ದಾರೆ. ಅಯ್ಯೋ ಯಡವಟ್ಟು ಆಯ್ತಲ್ಲೋ ಮೈಲಾರಜ್ಜ" ಎಂದು ಹೆದರಿ ಮಗನ ಬಳಿ ಹಾರಿ ಹೋದಳು. ಅವನ ಕೈ ಹಿಡಿದು, "ಬಾ ತಮ್ಮಾ ಹೊರಗೆ" ಎಂದು ಬೀದಿಗೆ ಕರೆ ತಂದಳು. ಮಾತು ಹೊರಡದೆ ಗಲ್ಲಲ್ಲೋ ಎಂದು ಎಲೆಯಡಿಕೆ ಜೊಲ್ಲು ಕಿತ್ತು ಬರುವಂತೆ ಅಳತೊಡಗಿದಳು. "ಏನಬ್ಬೆ ಏನಾತು" ಎಂದು ದುಗುಡದಿಂದ ಮಗ ಕೇಳಿದನು. ಉಸಿರ ಬಿಗಿ ಹಿಡಿದು, "ತಮ್ಮಾ ಇವರು ಯಾವ ಜಾತೀರಂತ ತಿಳ್ಕೊಂಡಿದ್ದೀಯೇನಪ್ಪಾ?

ಮಗ: ಯಾಕಬ್ಬೆ.

ತಾಯಿ: "ನಾನ್ ಕೇಳಿಸ್ಕೊಂಡೆ ತಮ್ಮಾ.ಇವ್ರು ಮಾತಾಡೋದು ಸಾಬ್ರು ಭಾಷೆ ಇದ್ದಂಗೆ ಐತೆ. ಅದೇನೋ ಕಿಸ್ಕಾರೆ, ಪಸ್ಕಾರೆ ಅಂತಿದ್ದಾರೆ. ಜಾತಿ ಬಿಟ್ಟು ದುಡ್ಡಿನಾಸೆಗೆ ಬೇರೆ ಕಡೆ ಸಂಬಂಧ ನೋಡಿದೇನೋ ನನ್ಮಗನೆ."

ಮಗ: "ಹಂಗೇನಿಲ್ಲಬ್ಬೆ. ಇವ್ರು ದೊಡ್ಡ ಕುರುಬರು. ಹತ್ತಿ ಕಂಕಣದೋರಂತೆ. ಎಲ್ಲಾ ಇಚಾರ ಮಾಡದ್ದೀನಿ. ನೀನ್ ಸುಮ್ಕಿರು. ನಾನೇ ತಿಳ್ಕತ್ತೀನಿ. ಅವೇನ್ ಹೇಳಿದ್ರೋ ನೀನೇನ್ ಕೇಳಿದ್ಯೊ? ಆ ಶ್ಯಾಮನೂ ನಮ್ ಜಾತಿ ಅಂದ" ಎಂದು ಗೊಣಗುತ್ತಲೇ ತಾಯಿಯ ಸಮಾಧಾನ ಪಡಿಸಲೆತ್ನಿಸಿದನು. ಗಂಗವ್ವನ ಆತಂಕ ಕಡಿಮೆಯಾಗಲಿಲ್ಲ.

ಯಾವುದು ಖಿಲ್ಲಾ ಆಗಲಿ ಅಂತ ಸಂಬಂಧ ಹೇಳಿದ್ದ, ಬಲಹೇರಿ ಬೀಗತನ ಕುದುರಿಸಿದ್ದ ಘನಶ್ಯಾಮನನ್ನು ತಾಯಿಯೂ, ಮಗನೂ ಹೊರಗೆ ಕರೆಸಿಕೊಂಡರು. ಒಳಗೆ ಕೂತವರು ಕೊಟ್ಟಿದ್ದ ತಿಂಡಿ, ಹಣ್ಣು, ಸ್ವೀಟು, ಚಾ ಎಲ್ಲಾ ಜಾಲಾಡಿಸಿ ಈಗ ಎಲೆಯಡಿಕೆಗೆ ತಟ್ಟೆಗೆ ಕೈ ಹಾಕಿ ಕೆಲಸಕ್ಕೆ ಬಾರದ ಘನಂದಾರಿ ವಿಷಯಗಳಲ್ಲಿ ಮುಳುಗಿ ಹೋಗಿದ್ದರು. ಇತ್ತ ಅವ್ವ ಮಗನೊಳಗೆ ಆತಂಕದ ಬೆಂಕಿ ಹತ್ತಿ ಹೋಗಿತ್ತು.

ಘನಶ್ಯಾಮ ಮಳ್ಳನಂತೆ ಬಂದನು. ಗುಡ್ಡಪ್ಪ ಸ್ವಲ್ಪ ಗಡಸಾಗೇ ಪ್ರಶ್ನಿಸಿ, "ಲೇ ಶ್ಯಾಮ ಇಲ್ಲೇನಾಗ್ತೈತೆ ನಿಜ ಬೊಗಳು. ಇವ್ರು ಕುರುಬರು ಅಂತ ನಾವು ಬೀಗತನಕ್ಕೆ ಬಂದೀವಿ. ನೀನು ನೋಡಿದ್ರೆ ಅವತ್ತಿಂದ ನಮ್ ನೆಂಟ್ರೂ ಅಂತಿಯಾ. ಹಂಗದ್ಮೇಲೆ ಇವ್ರು ಒಕ್ಕಲಿಗ ಗೌಡ್ರಾ? ನಮ್ಮವ್ವ ಅವ್ರು ಸಾಬ್ರು ಭಾಷೆ ಮಾತಾಡ್ತಾರೆ ನಾನೇ ಖುದ್ದು ಕೇಳ್ದೆ ಅಂತಾಳೆ. ಇದ್ಯಾಕೋ ಚೆನ್ನಾಗಿರಂಗಿಲ್ಲ. ಒಟ್ಟು ಈ ಸಂಬಂಧಾನೇ ಕಲಸಿಟ್ಟಂಗೈತೆ. ಈ ಗೋಜಲೇ ಬ್ಯಾಡ. ನಾನು ಆಗಲ್ಲ ಅನ್ನೋನೆ ನೈ" ಎಂದು ಉರಿದು ನಿಂತನು.

ಇವರಿಬ್ಬರ ದಿಗಿಲಾಟಕ್ಕೆ ಕಿಸಕಿಸಾಂತ ನಕ್ಕ ಘನಶ್ಯಾಮನು, "ಲೇ ಕುಟ್ರಿ ಮಂಗ್ಯಾ ನನ್ಮಗನೆ ಅದು ಹಂಗಲ್ಲ ಕಣೋ. ಇವ್ರು ದಿಟವಾಗಿ ಕುರುಬರೇನೆ ಕಂಡ್ಲಾ ಮಂಕುದಿಣ್ಣೆ. ನಿಂಗಾಗೋ ಮಾವ ಮೇಷ್ಟ್ರು ರಸಿಕ ಕಂಡ್ಲಾ. ನಮ್ಮ ಗೌಡ್ರು ಜಾತಿ ಹೆಂಗ್ಸಾ ಸೀರುಡಿಕೆ ಮಾಡ್ಕಂಡಿದಾನಂತೆ. ಆಯಮ್ಮನ ಕೂಡ ಎರಡನೇ ಸಂಸಾರ ನಡಿಸ್ತಾ ಇದಾನಂತೆ. ಹಂಗಾಗಿ ಖುಶಾಲಿಗೆ ನೆಂಟ್ರೂ ಅಂದೆ. ಈ ಕಾರಣ ಮುಂದ್ ಮಾಡಿ ಬಂದೋರೆಲ್ಲಾ ಹುಡ್ಗಿ ಬ್ಯಾಡಾಂದು ಬಿಟ್ಟು ಹೋಗ್ತಾ ಇದ್ರಂತೆ. ಇರೋ ವಿಷಯ ನಿಮಿಗೆ ಹೇಳಿದ್ದೀನಿ. ನನ್ ಮಗಳ ಬಾಳು ಹಾಳಾದಂಗೆ ಹೆಂಗಾರು ನಿಮ್ಮ ಗೆಳೆಯನ ಒಪ್ಸಿ. ನೀವೆಲ್ಲಾ ಅಫೀಷಿಯಲ್ ಇದ್ದೀರಿ. ನನ್ನ ಕೈಲಾಗದಿದ್ರೂ ಅವರು